ಅಲ್ಲ ಎಂಬುದು ಜನಾರ್ದನನಿಗೆ ಗೊತ್ತಿದೆ. ಕೂತಲ್ಲೇ ಅಂಡೆಳೆದುಕೊಂಡು ಸರಿದಾಡುತ್ತಿದ್ದ ಪಾಪಣ್ಣ ನೇತ್ರ ಇದ್ದಲ್ಲಿ ಹೋಗಿದ್ದು ಉದ್ದೇಶಪೂರ್ವಕವೇನಲ್ಲ. ಅಷ್ಟೆಲ್ಲಾ ಬುದ್ಧಿ ಆ ಕಂದನಿಗಿಲ್ಲ. ಮಗು ಹೋಗಿ ಅವಳ ಸೀರೆಯ ನೆರಿ ಹಿಡಿದು ಎಳೆದಿದೆ. ಪೇಪರೋದುತ್ತಾ ಕುರ್ಚಿಯಲ್ಲಿ ಆಸೀನಳಾಗಿದ್ದ ನೇತ್ರಾ ತನ್ನ ಕಾಲಬುಡಕ್ಕೆ ಬಂದ ತಮ್ಮನನ್ನು ಒದ್ದು ದೂರ ಸರಿಸಿದ್ದಾಳೆ. ಪೆಟ್ಟಾಗುವಂತಾ ಒದೆತವೇನಲ್ಲ. ಆದರೆ ಅದರ ಪೆಟ್ಟು ಬಿದ್ದಿದ್ದು ಈ ಘಟನೆಗೆ ಸಾಕ್ಷಿಯಾಗಿದ್ದ ಜನಾರ್ದನನ ಹೃದಯಕ್ಕೆ. ಒಡೆದುಹೋಯ್ತು ಅವನ ಮನಸ್ಸು. ಮುರಿದು ಬಿತ್ತು ಮಗಳ ಬಗೆಗಿನ ಮಮಕಾರ. ಹೌದು, ತಾನೇಕೆ ಇವಳ ಅಹಂಕಾರವನ್ನು ಪೋಷಿಸುತ್ತಾ ಇವಳನ್ನು ಸೈರಿಸಿಕೊಂಡಿದ್ದೇನೆ? ತಾನು ಉಣ್ಣುತ್ತಿರುವುದು ತನ್ನ ಮನೆಯ ಅನ್ನ. ತನ್ನ ಮಗನಿಗೆ ಬುದ್ಧಿ ಇಲ್ಲದಿದ್ದರೇನಂತೆ, ಅವನಿಗೂ ಪಿತ್ರಾರ್ಜಿತ ಆಸ್ತಿಯಲ್ಲಿದೆ ಅವಳಷ್ಟೇ ಹಕ್ಕು. ಆ ಒಂದು ಕ್ಷಣದಲ್ಲಿ ಜನಾರ್ದನನ ಮನಸ್ಸಿನ ಹೊಯ್ದಾಟ ನಿಂತು ಹೋಗಿ ಮನಸ್ಸು ಸ್ಥಿರವಾಗಿ ನಿಂತು ಒಂದು ತೀರ್ಮಾನಕ್ಕೆ ತಲುಪಿತು.

★★★

ಕೋಣೆಯ ಗಾಳಿಯಲ್ಲಿ ಪೌಡರಿನ ಘಮಲು. ಅದೀಗಷ್ಟೇ ಸ್ನಾನ ಮಾಡಿಸಿ ಸೊಂಟದಲ್ಲಿ ಚಚ್ಚಿಕೊಂಡು ಬಂದ ಪಾಪಣ್ಣನಿಗೆ ಪೌಡರ್ ಹಚ್ಚಿ, ಎಡಗೈಯಿಂದ ಅವನ ಗಲ್ಲ ಹಿಡಿದೆತ್ತಿ, ಬಲಗೈಯಿಂದ ಅವನ ಕ್ರಾಪು ಬಾಚುತ್ತಿದ್ದಳು ಮಾಲಕ್ಷ್ಮಿ.

"ನಿನ್ಹತ್ರ ಸ್ವಲ್ಪ ಮಾತಾಡ್ಬೇಕಿತ್ತು" ಎನ್ನುವ ದನಿ ಅನಿರೀಕ್ಷಿತವಾಗಿ ಬಾಗಿಲಿನೆಡೆಯಿಂದ ಬಂತು. ಬಾಗಿಲಿಗೆ ಬೆನ್ನು ಹಾಕಿ ನಿಂತು ಹುಡುಗನ ಬೈತಲೆ ತೆಗೆಯುವುದರಲ್ಲಿ ಮಗ್ನಳಾಗಿದ್ದ ಮಾಲಕ್ಷ್ಮಿ ಬೆಚ್ಚಿ ಬಿದ್ದು ಹಿಂದೆ ನೋಡಿದರೆ ಬಾಗಿಲಲ್ಲಿ ನಿಂತಿದ್ದಾನೆ ಜನಾರ್ದನ. ಮುಖದಲ್ಲಿ ಬಿಳಿಯ ಕುರುಚಲು ಗಡ್ಡ. ಕಣ್ಣುಗಳಲ್ಲಿ ಮಡುಗಟ್ಟಿದ ವ್ಯಥೆ. ಲುಂಗಿಯ ಮೇಲಿದ್ದ ಬನಿಯನ್ನು ಅಲ್ಲಲ್ಲಿ ಕಂಡಿ ಬಿಟ್ಟುಕೊಂಡು, 'ಅಯ್ಯೋ...' ಅನಿಸಿತು ಮಾಲಕ್ಷ್ಮಿಗೆ. ಲಕ್ಷಗಟ್ಟಲೆ ಆಸ್ತಿ ಇದ್ದರೇನು ಫಲ, ತನ್ನಪ್ಪನಷ್ಟು ಕೂಡಾ ಈ ಮನುಷ್ಯನಿಗೆ ಸುಖ, ನೆಮ್ಮದಿ ಇಲ್ಲ. ಮಾಲಕ್ಷ್ಮಿ ಸೊಂಟಕ್ಕೆ ಬಿಗಿದಿದ್ದ ಸೆರಗು ಬಿಚ್ಚಿ ಮೈ ತುಂಬಾ ಹೊದ್ದುಕೊಂಡು, "ಹೇಳಿ..." ಅಂದಳು.

"ಯಾಕೋ ನಂಗೆ ಹೆದರಿಕೆ ಹತ್ಕೊಂಡಿದೆ..." ಅಂದ ಜನಾರ್ದನ, "ಕೊನೆಗಾಲದಲ್ಲಿ ನೆಮ್ಮದಿಯಿಂದ ಸಾಯೋಕೂ ಕೇಳ್ಕೊಂಡು ಬಂದಿರ್ಬೇಕು. ಆ ಹುಡುಗಿ ಒಬ್ಳು ಸರಿಯಾಗಿದ್ದಿದ್ರೆ ನಾನ್ಯಾಕೆ ಚಿಂತೆ ಮಾಡ್ಬೇಕಿತ್ತು..."

"..."

"ತಮ್ಮನನ್ನ ಕಣ್ಣಕುಡೀಲಿ ಕಂಡ್ರೂ ಸೈಸಲ್ಲ ಅಂತಾಳೆ. ಏನು ಸಾಯ್ಬೇಕು ನಾನು?"

"ಅಷ್ಟೆಲ್ಲಾ ಯೋಚಿಸೋಕೆ ಹೋಗ್ಬೇಡಿ. ಇನ್ನೂ ಹುಡುಗಾಟಿಕೆ ಬಿಟ್ಟಿಲ್ಲ ಅವ್ಳಿಗೆ..."

"ವರ್ಷ ಇಪ್ಪತ್ತೇಳಾಯ್ತು. ಇನ್ಯಾವತ್ತು ಹುಡುಗಾಟಿಕೆ ಬಿಡೋದು?"

"..."

"ಅವಳನ್ನ ನಾವು ಬೆಳೆಸಿದ ರೀತೀನೇ ಸರಿ ಇರ್ಲಿಲ್ವೇನೊ. ಒಬ್ಬಳೇ ಮಗಳು ಅಂತ ಮೆರೆದಾಡಿಸಿದ್ದು ಜಾಸ್ತಿಯಾಯ್ತು. ಬೇರೆಯೋರ ಕಷ್ಟ, ಸುಖ ಅರ್ಥಾನೇ ಆಗಲ್ಲ ಅವಳಿಗೆ. ಬೇಕಾಗೂ ಇಲ್ಲ. ತಾನೊಬ್ಳು ಸುಖವಾಗಿದ್ರೆ ಸೈ."

"ಯಾಕೋ ಭಾಳ ಮನಸ್ಸಿಗೆ ಹಚ್ಕೊಂಡಿದೀರಿ" ಅಂದಳು ಮಾಲಕ್ಷ್ಮಿ.

"ಹಚ್ಕೊಂಡಿದ್ದೆ. ಆದ್ರೆ ಈಗ ಒಂದು ತೀರ್ಮಾನಕ್ಕೆ ಬಂದಿದೀನಿ. ಮಾಲಕ್ಷ್ಮೀ, ಸತ್ಯ ಹೇಳು,